ಕವಿತೆ



**ಚಿಂತಾಮಣಿ ಕೊಡ್ಲೆಕೆರೆ**

ಕಲೆ: ಮುರಳೀಧರ್ ರಾಥೋಡ್



# ಮಳೆಯೊಳದ್ದಿ

ಮಳೆಯೊಳದ್ದಿ ಮುಳುಗುತಿದೆ
ಬೀಸುಗಾಳಿಗಲುಗುತಿದೆ
ಹೊಯ್ದಾಡುತ ಅತ್ತ ಇತ್ತ
ನಲುಗಾಡಿದೆ ನನ್ನ ಚಿತ್ತ
ಭ್ರಾಂತ ಸಾಗರ

ನೋವಿನಲೆಗಳೆದ್ದು ಬಿದ್ದು
ಮೊರೆದು ಸಾವಿರ

ಒಡೆದ ಕನಸುಗಳನು ಹೊತ್ತು
ನಡೆಯುತಿದ್ದೆ ಬಿಸಿಲ ಹೊತ್ತು
ದಾರಿಯಲ್ಲಿ ಬಳಲಿ ಬೆವರಿ
ಉಳಿದ ಆಸೆ ಕಂದು ಕಮರಿ
ಕೆಳಗೆ ಬಿದ್ದೆನು

ತಿಳಿಯಲಿಲ್ಲ ಮತ್ತೆ ಹೇಗೆ
ಮೇಲಕೆದ್ದೆನು!

ಹೊಂಬಿಸಿಲಲಿ ಹೊಳೆಯುತಿದೆ
ಅಬ್ಬಿನೀರಲಿಳಿಯುತಿದೆ
ನವಿಲಿನೊಡನೆ ನಾಟ್ಯವಾಡಿ
ಹಕ್ಕಿಯೊಡನೆ ಕೂಡಿ ಹಾಡಿ
ಶಾಂತ ಸಾಗರ

ಯಾರು ನನಗೆ ಕೊಟ್ಟರಿಂಥ
ಒಲವಿನೋಗರ!

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68